ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/64/2015-16. ದಿನಾಂಕ:12-07-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಓಬಯ್ಯ ತಂದೆ ಲೇಟ್ ಪುರುಸು ಬೋಸಯ್ಯ<br>2)ಬೋರಯ್ಯ ತಂದೆ ಪುರುಬೋಸಯ್ಯ<br>ಯರ್ರಗುಂಡ್ಲಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು | ಬೋರಯ್ಯ ತಂದೆ ಪುರುಸು ಓಬಯ್ಯ<br>ಚಿಕ್ಕುಂತಿ ಗ್ರಾಮ<br>ಮೊಳಕಾಲ್ಮೂರು ತಾಲೂಕು<br>ಚಿತ್ರದುರ್ಗ ಜಿಲ್ಲಾ |
| ಕೂಡ್ಲಿಗಿ ತಾಲೂಕು ಕಸಾಪುರ ಗ್ರಾಮದ ಸನಂ 168. 169 ವಿಸ್ತೀರ್ಣ 2-00. 3-90. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕಸಾಪುರ ಗ್ರಾಮದ ಸನಂ 168. 169 ವಿಸ್ತೀರ್ಣ 2-00. 3-90. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಯರ್ರಗುಂಡ್ಲಹಟ್ಟಿ ಗ್ರಾಮದ ಓಬಯ್ಯ ತಂದೆ ಲೇಟ್ ಪುರುಸು ಬೋಸಯ್ಯ. ಇವರು ದಿನಾಂಕ 27-11-2014 ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕಸಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 18-12-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಚಿತ್ರದುರ್ಗ ಜಿಲ್ಲಾ ಮೊಳಕಾಲ್ಮೂರು ತಾಲೂಕು ಚಿಕ್ಕುಂತಿ ಗ್ರಾಮದ ಬೋರಯ್ಯ ತಂದೆ ಪುರುಸು ಬೋಸಯ್ಯ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 19/2015-16. ದಿನಾಂಕ 19-01-2016. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 03-05-2016 ರಿಂದ 12-07-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಕಸಾಪುರ ಗ್ರಾಮದ ಸನಂ 168. 169 ವಿಸ್ತೀರ್ಣ 2-00. 3-90. ಎಕ್ರೆ ಜಮೀನುಗಳು ಅರ್ಜಿದಾರರ ಅಣ್ಣನಾದ ಬೋರಯ್ಯ ತಂದೆ ಪುರುಬೋಸಯ್ಯ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 27-11-2014 ರಂದು ಪಾಲು ವಿಭಾಗದ ಪತ್ರ ಬರೆಸಿ ಕೊಟ್ಟಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ನಮ್ಮ ತಂದೆಯವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ನಮ್ಮ ತಂದೆಯವರ ಒಪ್ಪಿಗೆ ಇಲ್ಲದ ಅರ್ಜಿದಾರರ ಹೆಸರಲ್ಲಿ ಪಾಲು ವಿಭಾಗದ ಪತ್ರ ಬರೆಯಿಸಿ ಕೊಟ್ಟಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಸದರಿ ಜಮೀನುಗಳ ಬಗ್ಗೆ ಉಭಯರು ಯಥಾಸ್ಥಿತಿಯಂತೆ ಮಾಡಲು ಕೋರಿರುವ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕಸಾಪುರ ಗ್ರಾಮದ ಸನಂ 168. 169 ವಿಸ್ತೀರ್ಣ 2-00. 3-90. ಎಕ್ರೆ ಜಮೀನುಗಳನ್ನು ಅರ್ಜಿದಾರರು ಮತ್ತು ತಕರಾರುದಾರರು ಸದರಿ ಜಮೀನುಗಳನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಕೋರಿರುವ ಕಾರಣ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 12-07-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಅರ್ಜಿದಾರರಾದ [illegible] ಲೇಟ್ ಪುರುಸು ಬೋಸಯ್ಯ. ಬೋರಯ್ಯ ತಂದೆ ಪುರುಬೋಸಯ್ಯ. ಯರ್ರಗುಂಡ್ಲಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಬಿ.ಪ್ರಕಾಶ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಬೋರಯ್ಯ ತಂದೆ ಪುರುಸು ಬೋಸಯ್ಯ. ಚಿಕ್ಕುಂತಿ ಗ್ರಾಮ ಮೋಳಕಾಲ್ಮೂರು ತಾಲೂಕು ಚಿತ್ರದುರ್ಗ ಜಿಲ್ಲಾ ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.